**<u>ಅಸಲು ದಾವಾ ಸಂಖ್ಯೆ - 72/2019</u>** **ಪಿ.ಡಬ್ಲ್ಯೂ:-2**

ದಿನಾಂಕಃ **13-02-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ವಾದಿ, ಪ್ರತಿವಾದಿ ಮತ್ತು ಅವರ ತಂದೆಯವರು ನನಗೆ ಗೊತ್ತು. ಗಣೇಶಪ್ಪನಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಅಂದರೆ ಬಸವಲಿಂಗಮ್ಮ, ಬಸಮ್ಮ, ಲಲಿತಾ, ಗೀತಾ, ವಾದಿ ಮತ್ತು ಪ್ರತಿವಾದಿಗಳು. ಗಣೇಶಪ್ಪನಿಗೆ ಕುಂದೂರು ಗ್ರಾಮದಲ್ಲಿ 2 ಸರ್ವೆ ನಂಬರ್ ಜಮೀನು, ಕೂಲಂಬಿ ಗ್ರಾಮದಲ್ಲಿ 3 ಸರ್ವೆ ನಂಬರ್ ಗಳ ಜಮೀನು, ಮತ್ತು ಕೂಲಂಬಿ ಗ್ರಾಮದಲ್ಲಿ ಇರುವ ಮನೆ. ವಾದಿಯು ಮನೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ ಯಾವ ಸರ್ವೆ ನಂಬರ್ ಆಸ್ತಿಗೆ ಸಲ್ಲಿಸಿದರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಿಡಿ-3 ರಂತೆ ವಾದಿ, ಪ್ರತಿವಾದಿ ಮತ್ತು ಅವರ ತಂದೆಯ ನಡುವೆ ಭಾಗಂಶ ಮಾಡಿಕೊಂಡಿದರೆ ಎಂದರೆ ಸರಿ. ಸದರಿ ಭಾಗಂಶ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ನಿಡಿ-3 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು, ಸಾಕ್ಷಿಯ ಸಹಿಯನ್ನು ನಿಡಿ-3(ಬಿ) ಎಂದು ಗುರುತಿಸಲಾಯಿತು. ವಾದಿ ಮತ್ತು ಪ್ರತಿವಾದಿಯ ತಂಗಿ ಗೀತಮ್ಮರವರು ವಾದಿ, ಪ್ರತಿವಾದಿ ಮತ್ತು ಇತರ ಸಹೋದರಿಯರ ಮತ್ತು ತಾಯಿಯ ಮೇಲೆ ಭಾಗಂಶ ಕೋರಿ ಮತ್ತು ನಿಡಿ-3 ದಾಖಲೆಯನ್ನು ಪ್ರಶ್ನಿಸಿ, ಹರಿಹರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವೆಯಲ್ಲಿ ಏನು ತೀರ್ಮಾನವಾಗಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ನ್ಯಾಯಾಲಯವು ವಜಾ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಗೀತಮ್ಮ ರವರು ದಾವಣಗೆರೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಮತ್ತು ಸದರಿ ಮೇಲ್ಮನವಿಯು ಸಹ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

ನಿಡಿ-3 ರ ಪ್ರಕಾರ ವಾದಿಯ ಭಾಗಕ್ಕೆ ಕೂಲಂಬಿ ಗ್ರಾಮದಲ್ಲಿ ಇರುವ ಸರ್ವೆ ನಂ. 181/1 ರ ಪೈಕಿ 20 ಗುಂಟೆ, ಸರ್ವೆ ನಂ.48/6 ರಲ್ಲಿ 36 ಗುಂಟೆ ಜಮೀನು, ಸರ್ವೆ ನಂ.95 ರಲ್ಲಿ 9 ಗುಂಟೆ ಜಮೀನು, ಕುಂದೂರು ಗ್ರಾಮದಲ್ಲಿ ಇರುವ ಸರ್ವೆ ನಂ.145 ರಲ್ಲಿ 3 ಎಕರೆ 5 ಗುಂಟೆ, ಸರ್ವೆ ನಂ.168 ರಲ್ಲಿ 5 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ನಿಡಿ-3 ರ ಪ್ರಕಾರ ಕೂಲಂಬಿ ಗ್ರಾಮದಲ್ಲಿ ಇರುವ ಸರ್ವೆ ನಂ. 181/1 ರ ಪೈಕಿ 5 ಎಕರೆ ಮತ್ತು 16 ಗುಂಟೆ ಜಮೀನು, ಸರ್ವೆ ನಂ. 158/1 ರಲ್ಲಿ 7 ಎಕರೆ 20 ಗುಂಟೆ ಜಮೀನು, ಸರ್ವೆ ನಂ. 48/6 ರಲ್ಲಿ 18 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 181/1 ರಲ್ಲಿ 6 ಗುಂಟೆ ಜಮೀನನ್ನು ಸರ್ಕಾರದವರು ಕಾಲುವೆಗಾಗಿ ಒತ್ತುವರಿ ಮಾಡಿಕೊಂಡಿದರೆ ಎಂದರೆ ಸರಿ. ಸರ್ವೆ ನಂ. 181/1 ರಲ್ಲಿ 5 ಎಕರೆ 10 ಗುಂಟೆ ಜಮೀನು ಪ್ರತಿವಾದಿಗೆ ಮತ್ತು 20 ಗುಂಟೆ ಜಮೀನು ವಾದಿಯ ಹೆಸರಿಗೆ ನಮೂದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ ಸರ್ವೆ ನಂ. 181/1 ರಲ್ಲಿ 5 ಎಕರೆ 10 ಗುಂಟೆ ಜಮೀನಿನ ಪೈಕಿ 11 ಗುಂಟೆ ಜಮೀನನ್ನು ಪಾರ್ವತಮ್ಮ ಕೋಂ ಶಂಕರಪ್ಪ ಎನ್ನುವವರಿಗೆ 2003-04 ನೇ ಸಾಲಿನಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 181/1 ರಲ್ಲಿ ಪ್ರತಿವಾದಿಗೆ 4 ಎಕರೆ 39 ಗುಂಟೆ ಜಮೀನು ಮಾತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-3 ದಾಖಲೆಗೆ ನಾನು ಓದಿ ತಿಳಿದುಕೊಂಡು ಸಾಕ್ಷಿಯಾಗಿ ಸಹಿಯನ್ನು ಮಾಡಿರುತ್ತೇನೆ.

ವಾದಿಯು ಸರ್ವೆ ನಂ. 181 ರಲ್ಲಿ 4 ಎಕರೆ 39 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ತಮಗೆ ಭಾಗಂಶದ ಮೂಲಕ ಬಂದ್ದಂತಹ ಕೆಲವೊಂದು ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ವಾದಿಯು ತನ್ನ ಹಿಸ್ಸೆಗೆ ಬರಬೇಕಾದ ಜಮೀನು ಬಂದಿಲ್ಲದ ಕಾರಣ ಭಾಗಂಶ ಕೋರಿ ಈ ದಾವೆಯನ್ನು ಸಲ್ಲಿಸಿದರೆ. ನಿಡಿ-3 ದಾಖಲೆಯನ್ನು ಮಾಡಿಕೊಳ್ಳುವ ಸಮಯದಲ್ಲಿ ಕೆಲವೊಂದು ಆಸ್ತಿಗಳಿಗೆ ಮೌಲ್ಯ ಜಾಸ್ತಿ ಇದ್ದು ಮತ್ತು ಕೆಲವೊಂದು ಆಸ್ತಿಗಳ ಮೌಲ್ಯ ಕಡಿಮೆ ಇದ್ದು, ಆ ಪ್ರಕಾರ ಆಸ್ತಿಗಳ ಮೌಲ್ಯ ಜಾಸ್ತಿ ಇರುವ ಆಸ್ತಿಗಳನ್ನು ಕಡಿಮೆ ಆಸ್ತಿಗಳನ್ನು ಮತ್ತು ಆಸ್ತಿಗಳ ಮೌಲ್ಯ ಕಡಿಮೆ ಇರುವ ಆಸ್ತಿಗಳನ್ನು ಹೆಚ್ಚು ಆಸ್ತಿಗಳಾಗಿ ಭಾಗಂಶ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತ್ತಾಸಕ್ತಿ ಇಲ್ಲದೇ ಇದ್ದರೂ

ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**